ಅಸಲು ದಾವಾ ಸಂಖ್ಯೆ - 312/2018
ಡಿಡಬ್ಲ್ಯೂ - 01
ದಿನಾಂಕ: 21.06.2024
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಂ ಎಂ ಪಿ ವಕೀಲರಿಂದ**

ನನ್ನ ಖುದ್ದು ಊರು ಸವಣೂರು ತಾಲೂಕಿನ ತವರಮೆಳ್ಳಿಹಳ್ಳಿ. ನಿಮ್ಮ ಜನಕ ತಂದೆಯ ಊರು ಯಾವುದೇ ಎಂದರೆ ಶಿಗ್ಗಾವಿ ತಾಲೂಕಿನ ಹಳೆಬಂಕಾಪುರ. ತವರಮೆಳ್ಳಿಹಳ್ಳಿಗೆ ನೀವು ಎಷ್ಟು ವರ್ಷದವರಿದ್ದಾಗ ಬಂದೀರಿ ಎಂದರೆ ಸುಮಾರ ಆರು ವರ್ಷದವನಿದ್ದಾಗ ಬಂದಿರುತ್ತೇನೆ. ನನ್ನ ವಯಸ್ಸು 62 ಇರುತ್ತದೆ. ದತ್ತಕ ಆಗುವ ಪೂರ್ವದಲ್ಲಿಯೇ ನೀವು ತವರಮೆಳ್ಳಿಹಳ್ಳಿಗೆ ಬಂದಿದ್ದೀರಿ ಎಂದರೆ ಸರಿ. ನಿಮ್ಮ ಶಾಲಾ ದಾಖಲಾತಿಯಲ್ಲಿ ನಿಮ್ಮ ಹೆಸರು ಏನು ಎಂದು ದಾಖಲಾಗಿತ್ತು ಎಂದರೆ ರಾಮೇಶ್ವರ ಚನ್ನಪ್ಪ ಹಳೆ ಬಂಕಾಪುರ ಎಂದು ದಾಖಲಾಗಿರುತ್ತದೆ. ನಿಮ್ಮ ಸರ್ವಿಸ್ ಪುಸ್ತಕದಲ್ಲಿ ನಿಮ್ಮ ಹೆಸರು ರಾಮೇಶ್ವರ ಚನ್ನಪ್ಪ ಹಳೆ ಬಂಕಾಪುರ ಎಂದು ಇರುತ್ತದೆ ಎಂದರೆ ಸರಿ. ನೀವು ದತ್ತಕ ಆಗುವ ಪೂರ್ವದಲ್ಲಿಯೇ ನೌಕರಿ ಮಾಡಿದರೋ ಅಥವಾ ದತ್ತಕವಾದ ನಂತರ ನೌಕರಿ ಮಾಡಿದರೋ ಎಂದರೆ ದತ್ತಕವಾದ ನಂತರ ನೌಕರಿ ಮಾಡಿರುತ್ತೇನೆ. ನಾನು 1989 ನೇ ಇಸ್ವಿಯಲ್ಲಿ ಪೊಲೀಸ ನೌಕರಿಗೆ ನೇಮಕನಾಗಿರುತ್ತೇನೆ.

ವಾದಿಯು ನನಗೆ ಸಂಬಂಧಿ ಅಲ್ಲ. ದತ್ತಕ ಪೂರ್ವದಲ್ಲಿ ವಾದಿಯು ನನಗೆ ಸಹೋದರಿಯಾಗಿದ್ದಳು. ಶಾಲಾ ದಾಖಲಾತಿಯಲ್ಲಿ ವಾದಿಯ ತಂದೆಯ ಹೆಸರು ಚನ್ನಬಸಪ್ಪ ತಳವಾರ ಉರ್ಫ ಬಾರ್ಕೇರ್ ಇದೆ ಎಂದರೆ ಇರಬಹುದು ಮುಂದುವರೆದು ನನಗೆ ಗೊತ್ತಿಲ್ಲ. ವಾದಿಯ ಎಲ್ಲಾ ದಾಖಲಾತಿಗಳಲ್ಲಿ ಅವರ ತಂದೆಯ ಹೆಸರು ಚನ್ನಬಸಪ್ಪ ತಳವಾರ ಉರ್ಫ ಬಾರ್ಕೇರ್ ಇದೆ ಎಂದರೆ ಸುಳ್ಳು. ನಿಪಿ 5 ರಲ್ಲಿ ವಾದಿಯ ತಂದೆಯ ಹೆಸರು ಚನ್ನಬಸಪ್ಪ ತಳವಾರ ಇದೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಇದೆ ಎಂದು ನುಡಿಯುತ್ತಾರೆ. ನಿಪಿ 6 ರಲ್ಲಿ ನಿಮ್ಮ ಜನಕ ತಂದೆಯ ಹೆಸರು ರಾಮೇಶ್ವರ ಚನ್ನಪ್ಪ ಹಳೆಬಂಕಾಪುರ ಇದೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಇದೆ ಎಂದು ನುಡಿಯುತ್ತಾರೆ. ನಿಪಿ 7 ರಲ್ಲಿ ವಾದಿಯ ಜನಕ ತಂದೆಯ ಹೆಸರು ಚನ್ನಬಸಪ್ಪ ಮತ್ತು ತಾಯಿಯ ಹೆಸರು ನಾಗವ್ವ ಇದೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಇದೆ ಎಂದು ನುಡಿಯುತ್ತಾರೆ. ಮುಂದುವರೆದು ನಿಪಿ 7 ಸೃಷ್ಟಿಸಿಕೊಂಡ ಸುಳ್ಳು ದಾಖಲೆ ಎಂದು ನುಡಿಯುತ್ತಾರೆ.

ವಾದಿಯ ಮದುವೆಯಾದ ಬಳಿಕ ಅವರ ಹೆಸರು ದ್ರಾಕ್ಷಾಯಣಿ ಬಸವರಾಜ ತಳವಾರ ಎಂದು ಬದಲಾಯಿತು ಎಂದರೆ ಹೌದು. ವಾದಿಯು ತನ್ನ ತವರು ಮನೆಯಲ್ಲಿ ಜನಿಸಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಮತ್ತು ಹಳೆಬಂಕಾಪುರ ಗ್ರಾಮಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ವಾದಿಯು ಬಂದು ಹೋಗುವುದನ್ನು ಮಾಡುತ್ತಿದ್ದಳು. ವಾದಿಯ ತಂದೆಯ ಹೆಸರು ಚನ್ನಬಸಪ್ಪ ಎಂದು ಎಲ್ಲಾ ದಾಖಲೆಗಳಲ್ಲಿ ಇದೆ ಚನ್ನಪ್ಪ ಎಂದು ಇರುವುದಿಲ್ಲ ಎಂದರೆ ಸುಳ್ಳು. ವಾದಿಯು ತಾನು ದೊಡ್ಡವಳಾಗುವ ತನಕ ತವರಮೆಳ್ಳಿಹಳ್ಳಿಯಲ್ಲಿಯೇ ಶಾಲೆಗೆ ಹೋಗುತ್ತಿದ್ದಳು ಎಂದರೆ ಸರಿ ನಾವು ಸಹ ನಮ್ಮ ತವರಮೆಳ್ಳಿಹಳ್ಳಿಯಲ್ಲಿ ಶಾಲೆ ಕಲಿತಿರುತ್ತೇವೆ. ನಿಮ್ಮ ಮನೆ ಹಾವೇರಿಯಲ್ಲಿ ಇದೆ ಎಂದರೆ ನಾನು ಬಂದು ಹೋಗುವುದನ್ನು ಮಾಡುತ್ತಿದ್ದೆ ಆದರೆ ತವರಮೆಳ್ಳಿಹಳ್ಳಿಯಲ್ಲಿ ಸ್ವಂತ ಮನೆ ಇರುತ್ತದೆ. ವಾದಿಯು ಈಗ ವಾಸವಿರುವ ಮನೆಯು ಚನ್ನಬಸಪ್ಪನ ಮನೆ ಎಂದರೆ ಸಾಕ್ಷಿಯು ಚನ್ನಬಸಪ್ಪನ ಮನೆಯಲ್ಲಿ ನಾನು ವಾಸವಿದ್ದೇನೆ ಎಂದು ನುಡಿಯುತ್ತಾರೆ.

ನಿಡಿ 25 ರಲ್ಲಿ ವಾದಿಯ ಹೆಸರು ದ್ರಾಕ್ಷಾಯಣಿ ಚನ್ನಬಸಪ್ಪ ತಳವಾರ ಇದೆ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ದಾವೆ ದಾಖಲಾಗುವ ಮುಂಚೆಯೇ ವಾದಿ ಮತ್ತು ಅವರ ಗಂಡ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿಯು ಈ ಜಮೀನು ಅವರದ್ದು ಎಂದಿದ್ದಕ್ಕೆ ನೀವು ಪೊಲೀಸ ನೌಕರಿಯಲ್ಲಿ ಇದ್ದಿದ್ದರಿಂದ ಅವರನ್ನು ಕಬ್ಜೆಯಿಂದ ಖಾಲಿ ಮಾಡಿಸಿದ್ದೀರಿ ಎಂದರೆ ಸುಳ್ಳು ನಾವೆ ಕಬ್ಜೆಯಲ್ಲಿ ಇದ್ದೆವು. ಚನ್ನಪ್ಪ ಮತು ಚನ್ನಬಸಪ್ಪರವರು ಅಣ್ಣ ತಮ್ಮಂದಿರು ಎಂದರೆ ಸರಿಯಲ್ಲ. ಗಂಗವ್ವ ಮತ್ತು ನಾಗವ್ವರವರು ಅಕ್ಕ ತಂಗಿಯವರು ಎಂದರೆ ಸರಿಯಲ್ಲ.

ಚನ್ನಬಸಪ್ಪನ ಹೆಂಡತಿ ಗಂಗವ್ವ ಎಂದರೆ ಸರಿ. ಆಕೆಯ ಆರೋಗ್ಯ ಸರಿ ಇರಲಿಲ್ಲ ಎಂದರೆ ಸುಳ್ಳು. ಆರೋಗ್ಯ ಚೆನ್ನಾಗಿ ಇಲ್ಲದೇ ಇದ್ದಿದ್ದರಿಂದ ಅವರಿಗೆ ಮಕ್ಕಳಾಗಿರುವುದಿಲ್ಲ ಎಂದರೆ ಸುಳ್ಳು. ಗಂಗವ್ವನ ಆರೋಗ್ಯ ಚೆನ್ನಾಗಿ ಇಲ್ಲದೇ ಇದ್ದಿದ್ದರಿಂದ ಅವಳ ಆರೋಗ್ಯಗಾಗಿ ಚನ್ನಬಸಪ್ಪನು ನಾಗವ್ವನನ್ನು ಉಪಚಾರಕ್ಕಾಗಿ ಕರೆದುಕೊಂಡು ಬಂದನು ಎಂದರೆ ಸುಳ್ಳು. ನಾಗವ್ವನನ್ನು ಗಂಗವ್ವನ ಉಪಚಾರಕ್ಕಾಗಿ ತಂದು ಇಟ್ಟುಕೊಡುವ ಪೂರ್ವದಲ್ಲಿಯೇ ನೀವು ಜನಿಸಿದ್ದೀರಿ ಎಂದರೆ ಸರಿ. ನಾಗವ್ವಳು ತವರಮೆಳ್ಳಿಹಳ್ಳಿಯಲ್ಲಿ ವಾಸವಾಗಿದ್ದಳು ಎಂದರೆ ಸುಳ್ಳು. ನಾಗವ್ವ ತವರಮೆಳ್ಳಿಹಳ್ಳಿಯಲ್ಲಿ ವಾಸವಾಗಿದ್ದರಿಂದ ವಾದಿಯು ಹುಟ್ಟಿದ್ದಳು ಎಂದರೆ ಸರಿಯಲ್ಲ. ಆಕೆ ಹುಟ್ಟಿದ್ದರಿಂದ ಆಕೆಯ ಹೆಸರನ್ನು ಚನ್ನಬಸಪ್ಪ ತಳವಾರ ಎಂದು ಇಟ್ಟರು ಎಂದರೆ ಸರಿಯಲ್ಲ.

ಅವರು ದಾವಾ ಆಸ್ತಿಯ ಸಲುವಾಗಿ ಆ ಹೆಸರನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ.

ಸಾಮಾನ್ಯವಾಗಿ ಮಕ್ಕಳು ತಮ್ಮ ತಂದೆಯ ಹೆಸರನ್ನು ಬದಲಾಯಿಸುವುದಿಲ್ಲ ಎಂದರೆ ಸಾಕ್ಷಿಯು ಆಸ್ತಿಯ ವಿಚಾರವಾಗಿ ಬದಲಾಯಿಸಿರುತ್ತಾರೆ ಎಂದು ನುಡಿಯುತ್ತಾರೆ. ನೀವು ದತ್ತಕವಾಗುವ ಪೂರ್ವದಲ್ಲಿಯೇ ವಾದಿಯ ಶಾಲಾ ದಾಖಲಾತಿಗಳಲ್ಲಿ ಅವರ ತಂದೆಯ ಹೆಸರು ಚನ್ನಬಸಪ್ಪ ತಳವಾರ ಇತ್ತು ಎಂದು ನಿಮಗೆ ತಿಳಿದಿತ್ತು ಎಂದರೆ ಸರಿಯಲ್ಲ. ವಾದಿಯು ಚನ್ನಬಸಪ್ಪ ತಳವಾರರವರ ಮಗಳು ಎಂದು ಗೊತ್ತಿದ್ದರೂ ಸಹ ನೀವು ದತ್ತಕವಾಗಿದ್ದೀರಿ ಎಂದರೆ ಸುಳ್ಳು. ವಾದಿಯು ಚನ್ನಬಸಪ್ಪನ ಮಗಳು ಇದ್ದರೂ ಸಹ ನೀವು ಕಾನೂನುಬಾಹಿರವಾಗಿ ಅವರ ದತ್ತಕವಾಗಿರುತ್ತೀರಿ ಎಂದರೆ ಸುಳ್ಳು.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು